

ಪ್ರೇಮಿ: ಪುರುಷ ತನ್ನ ಜೀವನದ ಎರಡು ಸಮಯದಲ್ಲಿ ಹೆಣ್ಣನ್ನು ಅರ್ಥ ಮಾಡಿಕೊಳ್ಳಲಾರ.

ಪ್ರೇಯಸಿ: ಯಾವ ಎರಡು ಸಮಯದಲ್ಲಿ?

ಪ್ರೇಮಿ: ಒಮ್ಮೆ ಮದುವೆಗೆ ಮುಂಚಿನ ಸಮಯ; ಇನ್ನೊಮ್ಮೆ ಮದುವೆಯ ನಂತರ.

★★★

ಮಗಳು: ಅಮ್ಮಾ ನಾನು ಆ ರಮಾಕಾಂತನನ್ನು ಮದುವೆಯಾಗಲಾರೆ. ಅವನು ಪೂರಾ ನಾಸ್ತಿಕ. ಅವನಿಗೆ ನರಕದ ಮೇಲೆ ಸ್ವಲ್ಪವೂ ನಂಬಿಕೆಯಿಲ್ಲ.

ತಾಯಿ: ನೀನು ಮೊದಲು ಅವನನ್ನು ಮದುವೆ ಮಾಡಿಕೋ! ಅವನಿಗೆ ಶೀಘ್ರವೇ ನರಕ ಇದೆ ಎಂಬ ನಂಬಿಕೆ ಹುಟ್ಟುತ್ತದೆ.

★★★

ಒಬ್ಬ: ನಿನ್ನ ಹೆಂಡತಿ ತುಂಬಾ ಸುಂದರಿಯಂತೆ ನಿಜವೇ?

ಇನ್ನೊಬ್ಬ: ನಾನೂ ಸಹ ಹಾಗೇ ಅನ್ಕೊಂಡಿದ್ದೆ. ಆದರೆ ನಿನ್ನ ಹೆಂಡತಿಯನ್ನು ನೋಡಿದ ಮೇಲೆ ನನ್ನ ಅಭಿಪ್ರಾಯ ಬದಲಾಗಿದೆ.

(ಸಂಗ್ರಹ) ಎಂ.ಕೆ.ಮಂಜುನಾಥ್, ಬೆಂಗಳೂರು

ಹೆಂಡತಿ: ನಮ್ಮ ಅಳಿಯಂದಿರು ವರದಕ್ಷಿಣೆ ಬೇಡ ಎಂದ ಕೂಡಲೇ ನಾವು ಖುಷಿಯಾಗಿದ್ದುದು ತಪ್ಪಾಯಿತ್ರೀ.

ಗಂಡ: ಯಾಕೆ ಈಗ ಏನಾಯಿತು?

ಹೆಂಡತಿ: 'ಮನೆ ಅಳಿಯನಾಗಿ ಬಿಡ್ತೀನಿ' ಅಂತ ಹೇಳುತ್ತಿದ್ದಾರಂತೆ.

★★★

ಅವಳು: ನಿಮ್ಮ ಮನೆಯಲ್ಲಿ ಇರೋದು ಒಂದೇ ಒಂದು ನಾಯಿಯಲ್ಲವೇ, ಮತ್ಯಾಕೆ 'ನಾಯಿಗಳಿವೆ; ಎಚ್ಚರಿಕೆ' ಅಂತ ಬರೆದಿದ್ದೀರಿ?

ಇವಳು: ನಮ್ಮ ಯಜಮಾನರು ಇರುವುದನ್ನೇ ಮರೆತುಬಿಟ್ಟೆಯಾ?

★★★

ಬಸ್ ಕಂಡಕ್ಟರ್: ಮಾವಿನಕೆರೆ ಬಂದಿದೆ, ಇಳಿಯುವವರು ಇಳಿದು ಬಿಡಿ.

ಪ್ರಯಾಣಿಕ: ಬಸ್ಸನ್ನು ಸ್ವಲ್ಪ ಮುಂದೆ ನಿಲ್ಲಿಸಿ ಕಂಡಕ್ಟರೇ? ನನಗೆ ಈಜೋಕೆ ಬರಲ್ಲ!

★★★

ಶೀಲಾ: (ಫೋನಿನಲ್ಲಿ) ನನ್ನ ಗಂಡ ಅಡುಗೆ ಮಾಡುತ್ತಿದ್ದಾಗ ಪ್ರಜ್ಞೆ ತಪ್ಪಿ ಬಿದ್ದಿದ್ದಾರೆ ಡಾಕ್ಟರೇ, ಈಗ ನಾನು ಏನು ಮಾಡಲಿ?

ಡಾಕ್ಟರ್: ವೆರಿ ಸಿಂಪಲ್. ಹೋಟೆಲಲ್ಲಿ ಊಟ ಮಾಡಿ!

(ಸಂಗ್ರಹ) ಡಾ.ವಿ. ಪುಗಳೇಂದಿ, ಬಳ್ಳಾರಿ





**ಆಕರ್ಷಣೀಯ ಒತ್ತಡ!**

ಹಿರಿಯರು ಹೇಳುತ್ತಿದ್ದರು, 'ನಿದ್ರಿಸುವಾಗ ಟೆನ್ಶನ್ ಜೊತೆ ಮಲಗ ಬಾರದು.'

ಆಶ್ಚರ್ಯವೆಂದರೆ, ಇದು ತಿಳಿದೂ ಜನರು ಹೆಂಡತಿಯ ಬಳಿಯೇ ಮಲಗುತ್ತಾರೆ!

★★★

**ವಿಳಂಬ?**

ಗೋಪಿಯ ಅಮ್ಮ: 20 ವರ್ಷಗಳ ತನಕ ನನಗೆ ಮಕ್ಕಳೇ ಆಗಲಿಲ್ಲ...

ಸಂದರ್ಶಕ: ಆಮೇಲೆ ನೀವೇನು ಮಾಡಿದಿರಿ?

ಅಮ್ಮ: ಆನಂತರ ನನಗೆ 21 ವರ್ಷ ತುಂಬುತ್ತಲೇ ನನ್ನಪ್ಪ ಮದುವೆ ಮಾಡಿಸಿಬಿಟ್ಟರು. ಆ ಬಳಿಕವೇ ಗೋಪಿ ಹುಟ್ಟಿದ್ದು...!

★★★

**ವಸ್ತು–ಶಾಸ್ತ್ರ!**

ಗೋಪಿ: ನನ್ನ ಹೆಂಡತಿಗೆ ವಾಸ್ತು ಶಾಸ್ತ್ರದಲ್ಲಿ ತುಂಬಾ ನಂಬಿಕೆಯಿದೆ.

ರಾಮು: ಹೇಗೆ?

ಗೋಪಿ: ಪ್ರತೀಬಾರಿ ನಾವು ಜಗಳವಾಡುವಾಗ ಅವಳು ಯಾವುದೋ ವಸ್ತುವನ್ನು ಕೈಗೆತ್ತಿಕೊಳ್ಳುತ್ತಾಳೆ ಮತ್ತದನ್ನು ಶಸ್ತ್ರವನ್ನಾಗಿ ಉಪಯೋಗಿಸುತ್ತಾಳೆ!

(ಸಂಗ್ರಹ)ರಮಣ್ ಶೆಟ್ಟಿ ರೆಂಜಾಳ್, ಮುಂಬೈ